O.S.No.453/2013
PW -1

ದಿನಾಂಕ 05/12/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಪಿ.ಡಿ.ಟಿ. ಪ್ರತಿವಾದಿ ಪರ ವಕೀಲರಿಂದ**

ಸರ್ವೆ ನಂ-123/3, 3 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. 1991-92 ನೇ ಸಾಲಿನಲ್ಲಿ ಭೂ ಪರಿವರ್ತನೆ ಆಗಿರುತ್ತದೆ ಎಂದರೆ ಸರಿ. ಅದರಲ್ಲಿ ಒಟ್ಟು 5 ನಿವೇಶಗಳನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಅದರಲ್ಲಿ ಒಂದು ನಿವೇಶನ 3 ನೇ ಪ್ರತಿವಾದಿ ಕೊಂಡುಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂ-123/3 ಮೂಲತಃ ವೆಂಕಟಲಕ್ಷ್ಮಮ್ಮ ಇವರಿಗೆ ಸೇರಿತ್ತು ಎಂದರೆ ಸರಿ. ಸದರಿಯವರು ನಿವೇಶನವನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ಇವರು ಸದರಿ ನಿವೇಶವನ್ನು ಮಲ್ಲಮ್ಮ ಮತ್ತು ಹನುಮಂತರಾಯಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಸರಿ. 2002 ನೇ ಸಾಲಿನಲ್ಲಿ ವೆಂಕಟಲಕ್ಷ್ಮಮ್ಮ ರವರು ನಳಿನಿ ರವರ ನಿವೇಶನಕ್ಕೆ ಗಲಾಟೆ ಮಾಡಿದ ಸಂಬಂಧ ಮೂಲ ದಾವೆ ಸಂಖ್ಯೆ-151/2002 ರಲ್ಲಿ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆ ಡಿಕ್ರಿಯಾಗಿದ್ದು ಸದರಿ ಆದೇಶದ ವಿರುದ್ಧ ವೆಂಕಲಕ್ಷ್ಮಮ್ಮ ರವರು ಮೆಲ್ಮನವಿ ಸಲ್ಲಿಸಿದ್ದರು ಸದರಿ ಮೆಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಮೇಲ್ಮನವಿ ಚಾಲ್ತಿಯಲ್ಲಿರುವಾಗಲೇ ನಾನು ವೆಂಕಟಲಕ್ಷ್ಮಮ್ಮ, ಹನುಮಂತರಾಯಪ್ಪ ರವರ ವಿರುದ್ಧ ನಾನು ಅಸಲು ದಾವಾ ನಂ-272/2003 ರಂತೆ ದಾವೆ ಹೂಡಿದ್ದೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ದಾವೆ ಏನು ತಿರ್ಮಾನವಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ

2. ನಾನು ಹನುಮಂತರಾಯಪ್ಪನಿಂದ 15 ವರ್ಷಗಳ ಹಿಂದೆ ಕ್ರಯದ ಕರಾರು ಪತ್ರ ಬರೆಸಿಕೊಂಡಿರುತ್ತೇನೆ ನಾನು ಕ್ರಯದ ಕರಾರು ಪತ್ರದ ಆಧಾರದ ಮೇಲೆ 3 ನೇ ಪ್ರತಿವಾದಿಯ ಆಸ್ತಿಯನ್ನು ಕ್ರಯ ಪತ್ರ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ವಿರುದ್ಧ ಅಸಲು ದಾವಾ ನಂ-176/2006

ರಂತೆ ದಾವೆ ಹೂಡಿದ್ದರು ಎಂದರೆ ಸರ, 2006 ನೇ ಸಾಲಿನಲ್ಲಿ ನಾವು ಆಸ್ತಿಯ ಮಾಲೀಕರು ಅಲ್ಲ , ನಿಮಗೆ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದು ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಆಗಿತ್ತು ಎಂದರೆ ಸರಿಯಲ್ಲ. ಸದರಿ ದಾವೆ ದಿ. 04/06/2010 ರಲ್ಲಿ ತಿರ್ಮಾನ ಆಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸಲ್ಲಿಸಿದ ದಾವೆ ಪೆಂಡಿಂಗ್ ಇರುವುದಿಲ್ಲ ಎಂದರೆ ಸರಿ.

3. ನಾನು ಅಸಲು ದಾವಾ ನಂ-176/2006 ಆದೇಶದ ವಿರುದ್ಧ ನಾನು ಎಲ್ಲಿಯಾ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ಕೊಂಡುಕೊಂಡಿದ್ದಂತ ನಿವೇಶನದ ಚಕ್ಕುಬಂದಿ ಪೂ-ದ-ರಸ್ತೆ , ಉ-ಸ್ಕೂಲ್ ಮೈದಾನ, ಪ-ಇದೇ ನಂಬರಿನ ವೆಂಕಲಕ್ಷ್ಮಮ್ಮನ ಸ್ವತ್ತು ಇದನ್ನೆ 3 ನೇ ಪ್ರತಿವಾದಿ ಕೊಂಡುಕೊಂಡಿರುತ್ತಾರೆ ಎಂದರೆ ಪೂ-ನನ್ನ ನಿವೇಶನ ಎಂದು ಉತ್ತರಿಸಿರುತ್ತಾರೆ. 3 ನೇ ಪ್ರತಿವಾದಿ ನಿವೇಶನದ ಪೂ-ನನಗೆ ಸಂಬಂದಧಿಸಿದ ಯಾವುದೇ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಚಕ್ಕುಬಂದಿಯಲ್ಲಿನ ಪೂರ ಜಾಗದಲ್ಲಿ ಈ ದಾವೆ ಹೂಡುವ ಮೊದಲೇ ಕಟ್ಟಡ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಖಾಲಿ ಜಾಗ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ- 123/3 ರಲ್ಲಿ ನನಗೆ ಸೇರಿದ ಯಾವುದೇ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೆಳಿದ ದಾವೆಗಳು ನಮ್ಮ ವಿರುದ್ಧ ಆಗಿರುವುದರಿಂದ, ನಾವು ಸೃಷ್ಟಿ ಮಾಡಿದ ನಿವೇಶನಗಳು ಎಂದರೆ ಸರಿಯಲ್ಲ. ಮೂಲ ದಾವೆ ನಂ-176/2006 ರಲ್ಲಿ ನಮ್ಮ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆಗಿದ್ದರೂ ಸಹ ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದೆ ತಿರ್ಮಾನವಾಗಿರುವ ವಿಚಾರವನ್ನು ಮರೆಮಾಚಿ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ನಿವೇಶನ ವೆಂಕಟಲಕ್ಷಮ್ಮ, ಹನುಮಂತರಾಯಪ್ಪ ಮತ್ತು ನನಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಸೇರಿದಂತ ಸೇರಿದ ಸ್ವತ್ತಿನಲ್ಲಿ ಪೂ-ರಸ್ತೆ ಇದ್ದು ಯಾವುದೇ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಮಾಲೀಕತ್ವ , ಸ್ವಾಧೀನ ಇಲ್ಲದಿದ್ದರೂ ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, 2010 ನೇ ಸಾಲಿನಿಂದ ಇಲ್ಲಿಯವರೆಗೂ 3 ನೇ ಪ್ರತೀವಾದಿಗೂ ಮತ್ತು ಉಳಿದ ಪ್ರತೀವಾದಿಗಳಿಗೆ ಅನಾವಶ್ಯಕವಾಗಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಂತರಾಯಪ್ಪ ಪ್ರತಿಭಂದಕಾಜ್ಞೆ ಉಲ್ಲಂಘನೆ ಮಾಡಿದ ಕಾರ 2 ತಿಂಗಳು ಶಿಕ್ಷೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ